**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 496/2015

Cw-12Pw-8

| | |
|---|---|
| ಹೆಸರು | ಪ್ರಶಾಂತ ತಂದೆ ಶ್ರೀಮಂತ ಪಟ್ಟಣಶೇಟ್ಟಿ |
| ವಯಸ್ಸು | 37 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಜಮಖಂಡಿ |

ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕ 13-01-2014 ರಂದು ನಾನು ಮತ್ತು ಚಾಸಾ-13 ರವರ ಸಮಕ್ಷಮ ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಗಾಯಿತ್ರಿ ಚಟ್ಟರ ರವರು ಮೃತ ಪಟ್ಟಿದ ಬಗ್ಗೆ ಪೋಲಿಸರು ಶವ ಪಂಚನಾಮೆಯನ್ನು ಜರುಗಿಸಿದ್ದು ನಾನು ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ . ಶವ ಪಂಚನಾಮೆಯನ್ನು ಸಂಜೆ 06-15 ರಿಂದ 07-15 ವರೆಗೆ ಜರುಗಿಸಿ ಆ ಕಾಲಕ್ಕೆ ಪೋಟೋ ಸಹ ತೆಗೆದಿರುತ್ತಾರೆ ಮೃತ ಗಾಯಿತ್ರಿ ಚಟ್ಟರ ಶವ ಪಂಚನಾಮೆ ನೋಡುತ್ತಿದ್ದು ಅದನ್ನು ನಿಪಿ- 11 ಎಂದು ಸಾಕ್ಷಿ ಸಹಿಯನ್ನು ನಿಪಿ- 11 ಎ ಎಂದು , ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ ಶ್ರೀ. ಎಸ್ ಬಿ ಎಚ್ 1 ಮತ್ತು 2 ನೇ ಆರೋಪಿ ಪರ ವಕೀಲರಿಂದ-**

ಮೃತ ಗಾಯಿತ್ರಿ ಚಟ್ಟರ ರವರು ನನ್ನ ಸಂಬಂದಿಕರು ಅವರ ಊರು ತೋದಲಬಾಗಿ ಆಗಿರುತ್ತದೆ . ಮನೆಯಿಂದ ಪೋನ ಕರೆ ಬಂದ ನಂತರ ನನಗೆ ಸದರಿ ವಿಚಾರದ ಬಗ್ಗೆ ತಿಳಿದು ಬಂದಿರುತ್ತದೆ . ಸದರಿ ವಿಚಾರದ ಬಗ್ಗೆ ನನಗೆ ಸಂಜೆ 05-30 ಗಂಟೆಗೆ ತಿಳಿದು ಬಂದಿರುತ್ತದೆ . ನಂತರ ನಾವರೆಲ್ಲರೂ ಸೇರಿ ಸುಮಾರು 15 ನಿಮೀಷಗಳಲ್ಲಿ ಹೋಗಿರುತ್ತೇವೆ . ಪಂಚನಾಮೆಯಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಈಗ ನಿಕರವಾಗಿ ನೆನಪಿಲ್ಲ . ಆ ದಿನ ಯಾವುದೇ ಪಂಚನಾಮೆ ಜರುಗಿಸಿದೆ ಒಂದು ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆಯನ್ನು ಜರುಗಿಸಿರುವದಿಲ್ಲ ಎಂದರೆ ಸರಿಯಲ್ಲ . ಅಪಘಾತದ ವಿಚಾರ ಸಹ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ . ನನಗೆ ಅಪಘಾತದ ವಿಚಾರವನ್ನು ಪೋಲಿಸರು ಹೇಳಿದ ಬಳಿಕ

ಗೊತ್ತಾಗಿರುತ್ತದೆ ಅದ್ದರಿಂದ ಈ ದಿನ ನ್ಯಾಯಾಲಯದ ಮುಂದೆ ಬಂದು ಮೃತ ಗಾಯಿತ್ರಿ ಚಟ್ಟರ ಇವಳು ಸಂಬಂದಿಕರಾದ ಕಾರಣ ಅವರ ವಾರಸುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಪಾಟೀ ಸವಾಲು ಶ್ರೀ ಆರ್ ಎಚ್ ಕೆ 3 ನೇ ಆರೋಪಿ ಪರ ವಕೀಲರಿಂದಃ-** ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿರುತ್ತಾರೆ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ